## BANGALORE SAHODAYA SCHOOLS COMPLEX ASSOCIATION
## PRE-BOARD EXAMINATION -2 (2025 – 2026)
## GRADE X

**Date: 10.01.2026** **Max Marks: 80**

**Subject: Kannada (015)** **Time: 3 hours**

ಸೂಚನೆಗಳು:

*ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು15 ಮುಖ್ಯಪ್ರಶ್ನೆಗಳಿರುತ್ತವೆ.

*ಈ ಪ್ರಶ್ನೆಪತ್ರಿಕೆಯು ಭಾಗ-A & ಭಾಗ-B ಎಂಬ ಎರಡು ಭಾಗಗಳನ್ನು ಮತ್ತು A B C D ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತವೆ.

*ವಿಭಾಗ- A ನಲ್ಲಿ ಒಟ್ಟು 4 ಮುಖ್ಯ ಪ್ರಶ್ನೆಗಳು, 10 ಬಹು ಆಯ್ಕೆಯ ಉಪ-ಪ್ರಶ್ನೆಗಳು ಮತ್ತು ಬರವಣಿಗೆಯ 10 ಪ್ರಶ್ನೆಗಳಿರುತ್ತವೆ.

*ಭಾಗ - A ಅನ್ವಯಿಕ ವ್ಯಾಕರಣದಲ್ಲಿ 10 ಬಹು ಆಯ್ಕೆಯ ಪ್ರಶ್ನೆಗಳು, 5 ಬರವಣಿಗೆಯ ಪ್ರಶ್ನೆಗಳು ಮತ್ತು ಪಠ್ಯಪೂರಕದ 5 ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಬೇಕು.

*ಭಾಗ B- (ಬರವಣಿಗೆ ಕೌಶಲ್ಯ) ವಿಭಾಗ - C ನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು.

*ಭಾಗ B- (ಪಠ್ಯಗಳ ಅಧ್ಯಯನ) ಅಲ್ಲಿನ ವಿಭಾಗ - D ಯಲ್ಲಿಯ 11 ರಿಂದ 15 ಮುಖ್ಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

| | | |
|---|---|---|
| ಭಾಗ – A (40 ಅಂಕಗಳು) | ವಾಚನ ಮತ್ತು ಗ್ರಹಿಕಾ ಕೌಶಲ್ಯ | 20 ಅಂಕಗಳು |
| | ಅನ್ವಯಿಕ ವ್ಯಾಕರಣ | 15 ಅಂಕಗಳು |
| | ಬಹುಆಯ್ಕೆ ಪ್ರಶ್ನೆ- ಪಠ್ಯಗಳ ಅಧ್ಯಯನ | 05 ಅಂಕಗಳು |
| ಭಾಗ – B (40 ಅಂಕಗಳು) | ಬರವಣಿಗೆ ಕೌಶಲ್ಯ | 12 ಅಂಕಗಳು |
| | ಪಠ್ಯಗಳ ಅಧ್ಯಯನ | 28 ಅಂಕಗಳು |
| | ಒಟ್ಟು ಅಂಕಗಳು | 80 ಅಂಕಗಳು |

### ಭಾಗ – A (40 ಅಂಕಗಳು)
### SECTION - A
### (ವಾಚನ ಮತ್ತು ಗ್ರಹಿಕಾ ಕೌಶಲ್ಯ) = 20 ಅಂಕಗಳು

1 ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5×1=5

ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಕೀರ್ತನಕಾರರು ದೇವನ ಲೀಲೆಗಳನ್ನು ವೈಭವೀಕರಿಸುತ್ತಾ ತತ್ವಜ್ಞಾನ, ವೈರಾಗ್ಯ, ಸಾಮಾಜಿಕ ವಿಡಂಬನೆ, ರಾಜಕೀಯ ವಿಡಂಬನೆ, ವೈಯಕ್ತಿಕ ನೋವು, ನಿರಾಶೆಗಳು, ಬದುಕಿನ ನಶ್ವರತೆ, ತಮ್ಮ ಸ್ವಾನುಭವಗಳನ್ನು

ಮನೋಜ್ಞವಾಗಿ ಹಾಡಿದ್ದಾರೆ. ಬದುಕಿನ ಪ್ರಸ್ತುತತೆಗೆ ಅಗತ್ಯವಾದ ಮೂಲ ಧಾತುಗಳೇನು? ಎಂಬ ಜಿಜ್ಞಾಸೆ ಬಹುಶಃ ವಚನಕಾರರಂತೆ ದಾಸರಲ್ಲಿಯೂ ಕಾಡಿದ ಸಾಮಾನ್ಯ ಸಂಗತಿಯಾಗಿರಬೇಕು. ಜೀವನ ಹಲವು ಹಂತಗಳಲ್ಲಿ ಪದೇಪದೇ ಕಾಡುವ ಅತೃಪ್ತಿಗೆ ಕಾರಣ ನಾವು ಇದ್ದುದ್ದರಲ್ಲಿ ಸುಖ ಕಾಣದೇ ಇರುವುದು. ಅಂತಹ ಸಂದರ್ಭಗಳಲ್ಲಿ ಐಹಿಕ ಅನುಭೋಗಗಳು ಹೆಚ್ಚಾದಷ್ಟು ಇಂತಹ ಅತೀರೇಕದ ಅಸಮಾಧಾನ ಅತೃಪ್ತಿಗಳು ತಾಂಡವವಾಡುತ್ತಾ, ಸಾಮಾಜಿಕ ಸಹ್ಯ ಮನೋಭಾವ ಕಡಿಮೆಯಾಗುತ್ತದೆ. ದುಷ್ಟತೆ, ಅನ್ಯಾಯ, ಅನಾಚಾರಗಳು ಭುಗಿಲೇಳುತ್ತವೆ. ಹಾಗಾದರೆ ಸಾಮಾಜಿಕ ಶಿಸ್ತು ಮೂಡಿಸುವ ಪರಿಯನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ಕಟ್ಟಿಕೊಡುತ್ತಾರೆ. ಘನ ತಮಂಧದ ಆಳದಲ್ಲಿ ಮುಳುಗೇಳುವ ಜನಸಾಮಾನ್ಯರ ಮನಸ್ಸನ್ನು ಸ್ಥಿರ ಚಿತ್ತದತ್ತ ನೆಲೆಸುವಂತೆ ಮಾಡುವ ಕೀರ್ತನೆಗಳನ್ನು ರಚಿಸಿ, ರಾಗವಾಗಿ ಜನರ ಮನಕ್ಕಿಳಿಯುವಂತೆ ಕಾವ್ಯ ರಚನೆ ಮಾಡಿದವರು ಕೀರ್ತನೆಕಾರರು. ನೂರಾರು ಕೀರ್ತನೆಗಳು, ಸುಳಾದಿ ಹಾಗೂ ಹರಿಕಥಾಮೃತಸಾರದಂತಹ ಮೇರು ಕೃತಿಯನ್ನು ರಚಿಸಿದ ಜಗನ್ನಾಥದಾಸರ ಕೃತಿಗಳಲ್ಲಿನ ಸಾಮಾಜಿಕ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಜಗನ್ನಾಥದಾಸರ ಕೃತಿಗಳ ಮುಖ್ಯ ಉದ್ದೇಶ ಭಕ್ತಿ ಪ್ರತಿಪಾದನೆಯಾಗಿದ್ದರು, ಅದರೊಂದಿಗೆ ಅವರು ಮಾತಾಪಿತರನ್ನು ಸಲಹಬೇಕು, ಎಲ್ಲರೊಂದಿಗೆ ಪ್ರೀತಿ ಗೌರವದಿಂದ ಬಾಳ್ವೆ ನಡೆಸಬೇಕು. ಕಷ್ಟ ಸಹಿಷ್ಣುತೆಯನ್ನು ಬೆಳೆಸಿಕೊಳ್ಳಬೇಕು, ಸರ್ವರಲ್ಲಿ ಭಗವಂತನನ್ನು ಕಾಣಬೇಕು ಎಂಬ ಅನೇಕ ಸಾಮಾಜಿಕ ಚಿಂತನೆ ಹೊಂದಿದ ಜೀವನ ಮೌಲ್ಯಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ವಚನ ಭಂಗ, ಅಪವಾದ, ಅಪನಂಬಿಕೆ, ವಿಪ್ರಲಾಪಗಳೇ ವೃದ್ಧಿಯಾಗುತ್ತಿರುವ ಒಂದು ಕಾಲಘಟ್ಟದಲ್ಲಿ ಸಮಾಜದ ಹಲವು ಅನ್ಯಾಯ ಅನೀತಿಗಳಿಗೆ ದಾಸ ಸಾಹಿತ್ಯ ತೆರೆದ ಕಣ್ಣಿನಿಂದ ಮುಲಾಮು ಹಚ್ಚುವ ಪ್ರಯತ್ನವನ್ನು ಮಾಡಿದೆ. ಅಂದಿನ ಕಾಲದ ಸಾಮಾಜಿಕ ಜೀವನದಲ್ಲಿ ದೈವತ್ವದ ಕಲ್ಪನೆಗಳು, ಬಹು ಪ್ರಖರವಾಗಿದ್ದವು ಮತ್ತು ಸಾಮಾನ್ಯರನ್ನು ಮೋಕ್ಷದ ನೆಪದಲ್ಲಿ ಆಧ್ಯಾತ್ಮದ ಸನ್ನಿಧಾನಕ್ಕೆ ಕೊಂಡೊಯ್ಯುವ ಸಾಧನವಾಗಿದ್ದವು. ಹಾಗಾಗಿ ದಾಸರು ಕೀರ್ತನೆಗಳಲ್ಲಿ ಆರ್ತತೆಯನ್ನು, ಆಧ್ಯಾತ್ಮವನ್ನು ಘನೀಕರಿಸಿ ಕಾವ್ಯ ರಚಿಸಿದರು. ಭಕ್ತಿಯ ಹೊನಲನ್ನು ಹರಿಸಿದರು. ಮಾನವ ಜನುಮದ ಸಾರ್ಥಕತೆಯನ್ನು, ಸಂಸ್ಕೃತಿಯ ಪರಂಪರೆಯ ಮಹತ್ವವನ್ನು ಮನಗಾಣಿಸಿದರು. 'ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ', 'ಜಾಲಿಯ ಮರದಂತೆ ದುರ್ಜನರು ಜಗದೊಳಗೆ', 'ಈಸಬೇಕು ಇದ್ದು ಜೈಸಬೇಕು' ಇತ್ಯಾದಿ ನುಡಿಗಳು ಬದುಕಿನ ತಲ್ಲಣಗಳಿಗೆ ಬಸವಳಿದು ನಿಂತ ಮನಸ್ಸಿಗೆ ಭರವಸೆಯನ್ನು, ಧೈರ್ಯವನ್ನು ತುಂಬುತ್ತವೆ. ಮಾನವ ಸಮುದಾಯದ ಸದಾಚಾರ, ಸಾತ್ವಿಕತೆಯನ್ನು ತ್ರಿಕರಣ ಶುದ್ಧತೆಯ ಮಹತ್ವವನ್ನು ಸಾರ್ವತ್ರಿಕ ನೆಲೆಯಲ್ಲಿ ಅರ್ಥಗರ್ಭಿತವಾಗಿ ಹೇಳಿದವರು ದಾಸರು. ದಾಸ ಪರಂಪರೆಯ ಕೀರ್ತನಕಾರರು ರಚಿಸಿದ ಕೀರ್ತನೆಗಳು ಜನಮನ ತಲುಪಿ ಸಾಮಾಜಿಕ ಪರಿವರ್ತನೆಗೆ ದಾರಿ ದೀಪವಾದವು. ದಾಸ ಸಾಹಿತ್ಯ ಹಾಗೂ ಕೀರ್ತನೆಗಳನ್ನು ಮನನ ಮಾಡಿಕೊಂಡು ಅವರ ಆದರ್ಶ ಹಾಗೂ ಚಿಂತನೆಗಳನ್ನು ಯುವಪೀಳಿಗೆಗೆ ತಲುಪಿಸಬೇಕು. ಶರಣರು, ದಾಸರು, ಅಂಬೇಡ್ಕರರು ಹೀಗೆ ಹಲವಾರು ಮಹನೀಯರನ್ನ ಜಾತಿ ಎಂಬ ಸಂಕೋಲೆಯಲ್ಲಿ ಕಟ್ಟಿ ಹಾಕಿದ್ದೇವೆ. ಆದರೆ ಅವರು ನಾವೆಲ್ಲಾ ಒಂದೇ ಎಂಬ ಸಂದೇಶವನ್ನು ಇಡೀ ಜಗತ್ತಿಗೆ ಸಾರಿದರು. ದಾಸರ ಶ್ರೀಮಂತ ಸಾಹಿತ್ಯ, ಧಾರ್ಮಿಕ ಚಿಂತನೆ, ಭಕ್ತಿಯ ರಸಾಮೃತ ಮತ್ತು ಸಮಾನತೆ ತತ್ವವನ್ನು ಬೋಧಿಸಿರುವುದು ಅಂದಿಗೆ ಮಾತ್ರ ಸೀಮಿತವಲ್ಲ, ಅದು ಸಾರ್ವಕಾಲಿಕವಾಗಿದೆ. ಹೀಗಾಗಿ ಅವುಗಳನ್ನು ನಮ್ಮ ಜೀವನದ ಆದರ್ಶಗಳಾಗಿ ಸ್ವೀಕರಿಸಬೇಕು. ಇಂದಿನ ಕಲುಷಿತ ಸಾಮಾಜಿಕ ವಾತಾವರಣದಲ್ಲಿ ಅದ್ಭುತ ಅರ್ಥವನ್ನೊಳಗೊಂಡ ದಾಸರ ಕೀರ್ತನೆಗಳ ಮರ್ಮವನ್ನು ಅರಿತುಕೊಳ್ಳುವುದು ಅಗತ್ಯವಾಗಿದೆ.

**ಪ್ರಶ್ನೆಗಳು:**

I. ಜೀವನದ ಅತೃಪ್ತಿಗೆ ಕಾರಣ______________

ಅ) ಇದ್ದುದ್ದರಲ್ಲಿ ಸುಖ ಕಾಣದೇ ಇರುವುದು.

ಆ) ಐಹಿಕ ಅನುಭೋಗಗಳು ಕಡಿಮೆಯಾಗಿರುವುದು.

ಇ) ಅಸಮಾಧಾನ ಅತೃಪ್ತಿಗಳು ದೂರವಾಗಿರುವುದು.

ಈ) ಸಾಮಾಜಿಕ ಸಹ್ಯ ಮನೋಭಾವ ಹೆಚ್ಚಾಗಿರುವುದು.

II. ದಾಸರು ತಮ್ಮ ಕೀರ್ತನೆಗಳಲ್ಲಿ ಇವುಗಳನ್ನು ಘನೀಕರಿಸಿದ್ದಾರೆ.

೧) ಜಾತಿ ಮತ್ತು ಸಂಕೋಲೆಯನ್ನು　　　　೨) ವೈರಾಗ್ಯ ಮತ್ತು ನಿರಾಶೆಯನ್ನು

೩) ಸದಾಚಾರ ಮತ್ತು ಅಭಿರುಚಿಯನ್ನು　　　　೪) ಆರ್ತತೆ ಮತ್ತು ಆಧ್ಯಾತ್ಮವನ್ನು

III. ಈ ನುಡಿಗಳು ಬದುಕಿನ ತಲ್ಲಣಗಳಿಗೆ ಬೇಸತ್ತು ನಿಂತ ಮನಸ್ಸಿಗೆ ಭರವಸೆಯನ್ನು, ಧೈರ್ಯವನ್ನು ತುಂಬುತ್ತವೆ.

೧) ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ

೨) ತಲ್ಲಣಿಸದಿರು ಕಂಡ್ಯ ತಾಳು ಜಗವೇ

೩) ಈಸಬೇಕು ಇದ್ದು ಜೈಸಬೇಕು

೪) ಜಾಲಿಯ ಮರದಂತೆ ದುರ್ಜನರು ಜಗದೊಳಗೆ

ಅ) ೧, ೨ ಮತ್ತು ೩ ಆ) ೨, ೩ ಮತ್ತು ೪ ಇ) ೧, ೩ ಮತ್ತು ೪ ಈ) ೧, ೨ ಮತ್ತು ೪

IV. ಘನ ತಮಂಧದ ಆಳದಲ್ಲಿ ಮುಳುಗೇಳುವ ಜನಸಾಮಾನ್ಯರ ಮನಸ್ಸನ್ನು ಯಾವುದು ಸ್ಥಿರ ಚಿತ್ತದತ್ತ ನೆಲೆಸುವಂತೆ ಮಾಡುತ್ತದೆ?

ಅ) ಚಿಂತನೆಗಳು ಆ) ಕೀರ್ತನೆಗಳು ಇ) ಆದರ್ಶಗಳು ಈ) ವಿಡಂಬನೆಗಳು

V. ಕೆಳಗೆ ಕೊಟ್ಟಿರುವ ಹೇಳಿಕೆಗಳನ್ನು ಓದಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

ಹೇಳಿಕೆ ೧. ನೂರಾರು ಕೀರ್ತನೆಗಳು, ಸುಳಾದಿ ಹಾಗೂ ಹರಿಕಥಾಮೃತಸಾರದಂತಹ ಮೇರು ಕೃತಿಯನ್ನು ರಚಿಸಿದ ಜಗನ್ನಾಥದಾಸರ ಕೃತಿಗಳಲ್ಲಿನ ರಾಜಕೀಯ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ.

ಹೇಳಿಕೆ ೨. ಮಾನವ ಸಮುದಾಯದ ಸದಾಚಾರ, ಸತ್ವಕತೆಯನ್ನು ತ್ರಿಕರಣ ಶುದ್ಧತೆಯ ಮಹತ್ವವನ್ನು ಸಾರ್ವತ್ರಿಕ ನೆಲೆಯಲ್ಲಿ ಅರ್ಥಗರ್ಭಿತವಾಗಿ ಹೇಳಿದವರು ದಾಸರು.

ಅ) ಒಂದನೇ ಹೇಳಿಕೆ ಮಾತ್ರ ಸರಿಯಾಗಿದೆ.

ಆ) ಎರಡನೇ ಹೇಳಿಕೆ ಮಾತ್ರ ಸರಿಯಾಗಿದೆ.

ಇ) ಒಂದು ಮತ್ತು ಎರಡನೆ ಹೇಳಿಕೆಗಳು ಸರಿಯಾಗಿವೆ.

ಈ) ಒಂದು ಮತ್ತು ಎರಡನೆ ಹೇಳಿಕೆಗಳು ತಪ್ಪಾಗಿವೆ.

**2 ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **5×1=5**

ಸೋಲಿಗರು ಎಂದರೆ ಪಶ್ಚಿಮಘಟ್ಟ ಮತ್ತು ಪೂರ್ವಘಟ್ಟಗಳನ್ನು ಬೆಸೆಯುವ ನೀಲಗಿರಿ ಜೈವಿಕ ಮಂಡಲ ವ್ಯಾಪ್ತಿಯಲ್ಲಿ ನೆಲೆಸಿರುವ ವಿಶಿಷ್ಟ ಆದಿವಾಸಿ ಸಮುದಾಯ. ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿರುವ ಸಂರಕ್ಷಿತ ಅರಣ್ಯ ಪ್ರದೇಶಗಳು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಕೆಲವು ಪ್ರದೇಶಗಳಲ್ಲೂ ಇವರ ಆವಾಸ ಹರಡಿದೆ.

ಚಾಮರಾಜನಗರ ಜಿಲ್ಲೆಯಲ್ಲೇ 35 ಸಾವಿರದಷ್ಟು ಸೋಲಿಗರಿದ್ದಾರೆ. ಅದರಲ್ಲೂ ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಆರುಕುಲ ಸೋಲಿಗರ ಭಾಷೆ, ಆಚಾರ, ವಿಚಾರ ಬೇರೆಯವರಿಗಿಂತ ಭಿನ್ನ. ಉಳಿದೆಲ್ಲ ಪ್ರದೇಶಗಳ ಸೋಲಿಗರು ಕನ್ನಡ ಭಾಷೆಯನ್ನೇ ಮಾತನಾಡಿದರೆ, ಇಲ್ಲಿರುವ 15 ಸಾವಿರದಷ್ಟು ಸೋಲಿಗರು ಕನ್ನಡ, ತಮಿಳು, ಸಂಸ್ಕೃತ ಮಿಶ್ರಿತ ಭಾಷೆ ಮಾತನಾಡುತ್ತಾರೆ. ಆಧುನಿಕತೆಯತ್ತ ಮುಖ ಮಾಡಿರುವ ಸಮುದಾಯದ ಯುವಜನರು ತಮ್ಮ ವಿಶಿಷ್ಟ ಸಂಸ್ಕೃತಿ, ಭಾಷೆಯಿಂದ ದೂರವಾಗುತ್ತಿದ್ದಾರೆ. ಅರಣ್ಯ ಸಂರಕ್ಷಣೆ ಕಾಯ್ದೆ ಜಾರಿಯಾದ ನಂತರ ಅರಣ್ಯದ ಜೊತೆ ಸೋಲಿಗರ ನಂಟು ಕಡಿಮೆಯಾಗಿದೆ. ಇದರಿಂದಾಗಿ ಅರಣ್ಯದ ಬಗ್ಗೆ ಯುವಪೀಳಿಗೆಗೆ ಹೆಚ್ಚಿನ ಮಾಹಿತಿ ಇಲ್ಲ. ಅದನ್ನು ಕಲಿಯುವ ಆಸಕ್ತಿಯನ್ನೂ ತೋರಿಸುತ್ತಿಲ್ಲ.

ತಮ್ಮ ವೈವಿಧ್ಯಮಯ ಸಂಸ್ಕೃತಿ, ಭಾಷೆಯನ್ನು ಉಳಿಸಿ ಬೆಳೆಸುವ ಅಗತ್ಯವನ್ನು ಮನಗಂಡಿರುವ ಸ್ಥಳೀಯ ವಿದ್ಯಾವಂತ ಸೋಲಿಗರು, ಹತ್ತು ಮಂದಿಯ ತಂಡ ಕಟ್ಟಿಕೊಂಡು ಸ್ವಯಂ ಸೇವಾ ಸಂಸ್ಥೆಗಳು, ಭಾಷಾ ವಿಜ್ಞಾನಿಗಳ ನೆರವಿನೊಂದಿಗೆ 'ಆದಿ' ಎಂಬ ಕಾರ್ಯಕ್ರಮ ರೂಪಿಸಿದ್ದಾರೆ. ಸೋಲಿಗರ ಜ್ಞಾನವನ್ನು ಪಸರಿಸಲು ಹೊಸ ಹಾದಿ ಹುಡುಕುವ ಈ ಯತ್ನಕ್ಕೆ ಸ್ವಯಂ ಸೇವಾ ಸಂಸ್ಥೆಗಳಾದ ಪುನರ್ಚಿತ್ ಮತ್ತು ರೈನ್‌ಮ್ಯಾಟರ್ ಫೌಂಡೇಷನ್ ಸಹಯೋಗ ನೀಡಿವೆ. ಸ್ಥಳೀಯ ಸೋಲಿಗ ಸಂಘಟನೆಗಳು ಇದಕ್ಕೆ ಕೈಜೋಡಿಸಿವೆ. ಮೊದಲೆಲ್ಲ ಸೋಲಿಗರ ಜ್ಞಾನವು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಕಾಡಿನ ಹಾದಿಗಳಲ್ಲಿ ಹಸ್ತಾಂತರವಾಗುತ್ತಿತ್ತು. ಹಿರಿಯರು ಮಕ್ಕಳನ್ನು ಕರೆದುಕೊಂಡು ಅರಣ್ಯದಲ್ಲಿ ಸುತ್ತಾಡುವಾಗ ಮೌಖಿಕವಾಗಿಯೇ ತಮ್ಮಲ್ಲಿರುವ ಎಲ್ಲಾ ಜ್ಞಾನಗಳನ್ನು ಧಾರೆ ಎರೆಯುತ್ತಿದ್ದರು.

ಈಗ ಕಾಡಿನೊಳಗೆ ಆದಿವಾಸಿಗಳು ಸುತ್ತಾಡುವುದು ಕಡಿಮೆಯಾಗಿದೆ. ಆಧುನಿಕ ಜಗತ್ತಿಗೆ ತೆರೆದುಕೊಂಡಿರುವ ಯುವ ಜನಾಂಗ, ಹಿರಿಯರೊಂದಿಗೆ ಮೊದಲಿನಷ್ಟು ಒಡನಾಡುತ್ತಿಲ್ಲ. ಹೀಗಾಗಿ, ಹಿರಿಯರ ಜ್ಞಾನ ಹೊಸ ಪೀಳಿಗೆಗೆ ತಲುಪುತ್ತಿಲ್ಲ ಎಂದು ಹೇಳುತ್ತಾರೆ ಭಾಷಾ ವಿಜ್ಞಾನಿ ಹಾಗೂ ಸೋಲಿಗರ ಭಾಷೆ, ಸಂಸ್ಕೃತಿ ಕುರಿತಾಗಿ ಹಲವು ವರ್ಷಗಳಿಂದ ಅಧ್ಯಯನ ನಡೆಸುತ್ತಿರುವ ಸಮಿರಾ ಅಗ್ನಿಹೋತ್ರಿ.

ಈಗ ಸೋಲಿಗರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಓದಿದವರಿಗೆ ಕೆಲಸ ಸಿಗುತ್ತಿಲ್ಲ. ಕೆಲಸದ ಸ್ಥಳಗಳಲ್ಲಿ ಅವರ ಭಿನ್ನ ಭಾಷಾ ಶೈಲಿ ಹಾಗೂ ಇನ್ನಿತರ ಕಾರಣಗಳಿಗೆ ತಾರತಮ್ಯಕ್ಕೂ ಒಳಗಾಗುತ್ತಿದ್ದಾರೆ. ಅತ್ತ ಕೆಲಸವೂ ಸಿಗದೆ, ಇತ್ತ ಹಾಡಿಗಳಲ್ಲಿ ಇರಲೂ ಆಗದೆ ತೊಂದರೆ ಅನುಭವಿಸುತ್ತಿದ್ದಾರೆ. ಸಾಕಷ್ಟು ಸವಾಲುಗಳ ನಡುವೆಯೇ ಕಾಡಿನ ಜ್ಞಾನವನ್ನು ಪುನರುತ್ಥಾನಗೊಳಿಸಲು ಸಮುದಾಯದವರೇ ಮುಂದಾಗಿದ್ದಾರೆ. ಅವರಿಗೆ ನಾವು ಸಹಾಯ ಮಾಡುತ್ತಿದ್ದೇವೆ ಎಂದು 'ಆದಿ' ಕಾರ್ಯಕ್ರಮದ ಸಂಚಾಲಕರೂ ಆಗಿರುವ ಸಮಿರಾ ಹೇಳುತ್ತಾರೆ. ಈ ಕಾರ್ಯಕ್ರಮದ ಅಡಿಯಲ್ಲಿ ಸೋಲಿಗ ಭಾಷೆ, ಆಚಾರ-ವಿಚಾರ ವೈವಿಧ್ಯ ಉಳಿಸುವ ಹಲವು ಪ್ರಯತ್ನಗಳು ನಡೆಯುತ್ತಿವೆ.

**ಪ್ರಶ್ನೆಗಳು:**

I. ನೀಲಗಿರಿ ಜೈವಿಕ ಮಂಡಲವು ಈ ಘಟ್ಟಗಳನ್ನು ಒಂದುಗೂಡಿಸುತ್ತದೆ.

ಅ) ಪಶ್ಚಿಮ ಮತ್ತು ಉತ್ತರ    ಆ) ಪಶ್ಚಿಮ ಮತ್ತು ದಕ್ಷಿಣ

ಇ) ಪಶ್ಚಿಮ ಮತ್ತು ಆಗ್ನೇಯ    ಈ) ಪಶ್ಚಿಮ ಮತ್ತು ಪೂರ್ವ

II. ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಸೋಲಿಗರು ____

ಅ) ಆರುಕುಲ    ಆ) ಮಲೆಕುಲ    ಇ) ಉರಳಿಕುಲ    ಈ) ಏಳುಕುಲ

III. ಆದಿ ಕಾರ್ಯಕ್ರಮವನ್ನು ಮುನ್ನಡೆಸುತ್ತಿರುವವರು ______________

ಅ) ಪುನರ್ಚಿತ್    ಆ) ರೈನ್‌ಮ್ಯಾಟರ್    ಇ) ಸೋಲಿಗರು    ಈ) ಸಮಿರಾ

IV. ಸೋಲಿಗರ ಹಿರಿಯರ ಜ್ಞಾನ ಹೊಸ ಪೀಳಿಗೆಗೆ ತಲುಪದೇ ಇರಲು ಕಾರಣ

ಅ) ಓದಿದವರಿಗೆ ಕೆಲಸ ಸಿಗದೇ ಇರುವುದು.

ಆ) ಅರಣ್ಯದ ಜೊತೆ ಸೋಲಿಗರ ನಂಟು ಹೆಚ್ಚಾಗಿರುವುದು.

ಇ) ಯುವ ಜನಾಂಗವು ಆಧುನಿಕ ಜಗತ್ತಿಗೆ ತೆರೆದುಕೊಂಡಿರುವುದು.

ಈ) ಸೋಲಿಗರ ಮಕ್ಕಳು ಶಿಕ್ಷಣ ಪಡೆಯುತ್ತಿರುವುದು.

V. ಸೋಲಿಗರ ಜ್ಞಾನವು ಇಲ್ಲಿ ಹಸ್ತಾಂತರವಾಗುತ್ತಿತ್ತು.

ಅ) ಸಂರಕ್ಷಣಾ ಕಾಯ್ದೆಯಲ್ಲಿ    ಆ) ಕಾಡಿನ ಹಾದಿಗಳಲ್ಲಿ

ಇ) ಸಮುದಾಯದಲ್ಲಿ    ಈ) ಕೆಲಸದ ಸ್ಥಳಗಳಲ್ಲಿ

**3 ಪು.ತಿ.ನ ವಿರಚಿತ 'ಶಬರಿ' ಎಂಬ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**5×1=5**

ಕೃಷ್ಣಮೂರ್ತಿಯ ಅಜ್ಜಂದಿರು ತುಮಕೂರು ಜಿಲ್ಲೆಯ ಒಂದು ಹಳ್ಳಿಯವರು. ಅವರ ಹಿರಿಯರು ಸಣ್ಣದೊಂದು ಸಂಸ್ಥಾನದಲ್ಲಿ ಮಂತ್ರಿಯಾಗಿದ್ದು ತಮ್ಮ ರಾಜಭಕ್ತಿಗಾಗಿ ಹೆಸರು ಪಡೆದವರು. ನಮ್ಮ ಕಥಾನಾಯಕರ ಕಾಲಕ್ಕೆ ಮಂತ್ರಿತ್ವ ಹೋಗಿ ಕೇವಲ ಶಾನುಭೋಗಿಕೆ ಮಾತ್ರ ಉಳಿದಿತ್ತು. ಆದರೂ ಶಾನುಭೋಗರು ತಮ್ಮ ವಂಶದ ಕೀರ್ತಿಗೆ ಕುಂದುತರದಂತೆ ಖಿರ್ದಿ ಪುಸ್ತಕವನ್ನು ನಿಷ್ಠೆಯಿಂದ ಕಾಪಾಡಿಕೊಂಡು ಮಸಿಯ ಕಾಣಿಕೆಗಾಗಿ ರೈತರನ್ನು ಪೀಡಿಸದೆ, ದೇವರು ಕೊಟ್ಟಷ್ಟರಲ್ಲಿ ತೃಪ್ತಿಗೊಂಡು ಜೀವನ ನಡೆಸುತ್ತಿದ್ದರು. ಅವರ ಭಾಗಕ್ಕೆ ಖಿರ್ದಿ ಪುಸ್ತಕ ಕೇವಲ ಜೀವನದ ಆಧಾರವಲ್ಲ; ಅವರ ರಾಜಭಕ್ತಿಯ ಲಾಂಛನ.

ಒಂದು ಬಾರಿ ಅವರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ

ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ, ಆದರೂ ಬೆಳುದಿಂಗಳ ದಿನ; ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಬೇಗಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಹಸಿವಿನ ಜೊತೆಗೆ ಭಯವೂ ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

ರಸ್ತೆಗೆ ಸ್ವಲ್ಪ ದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು. ದಿನವೆಲ್ಲಾ ನಿದ್ದೆಮಾಡಿ ಆಗ ತಾನೆ ಆಕಳಿಸುತ್ತ ಎದ್ದ ಹುಲಿಗೆ ತನ್ನ ಹೊಟ್ಟೆ ಬರಿದಾಗಿದೆಯೆಂದು ಭಾಸವಾಯಿತು. ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈಮುರಿದು ಹೊರಟಿತು. ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. ಆ ಸುವಾಸನೆಯ ಜಾಡನ್ನೇ ಹಿಡಿದು ನಿಶ್ಯಬ್ದವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು. ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆ ಒಂದಿತ್ತು; ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನುತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ.

ಆದ್ದರಿಂದ ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ. ನಿಶ್ಯಬ್ದವಾಗಿ ಅವನ ಹಿಂದೆಯೇ ನಡೆದು, ಅನಂತರ ಅವನ ಮುಂಭಾಗಕ್ಕೆ ನೆಗೆದು, ಕೂಡಲೆ ತಿರುಗಿ ಅವನ ಮೇಲೆ ಬೀಳಬೇಕು. ತನ್ನ ಬಡಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

**ಪ್ರಶ್ನೆಗಳು:**

I. ಶಾನುಭೋಗರು ಖಿರ್ದಿ ಪುಸ್ತಕವನ್ನು ರಾಜಭಕ್ತಿಯ ಲಾಂಛನವೆನ್ನಲು ಕಾರಣವೇನು?

II. ಶಾನುಭೋಗರ ಕಾಲು ಏಕೆ ಮತ್ತಷ್ಟು ಚುರುಕಾಯಿತು?

III. ಹುಲಿಯ ಆನಂದಕ್ಕೆ ಇದ್ದ ಕೊರತೆ ಯಾವುದು?

IV. ಹುಲಿಗಳು ಯಾವ ಧರ್ಮವನ್ನು ಪಾಲಿಸುತ್ತಿದ್ದವು?

V. ಹುಲಿಯು ಶಾನುಭೋಗರಿಗೆ ಅಭಿಮುಖವಾಗಿ ಬರಲು ಏನು ಮಾಡಬೇಕಿತ್ತು?

**4 ಕುವೆಂಪು ವಿರಚಿತ 'ಹಸುರು' ಪಠಿತ ಪದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ.** **5×1=5**

ನವರಾತ್ರಿಯ ನವಧಾತ್ರಿಯ
    ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
    ರಸಪಾನ ಸ್ನಾನದಲಿ!
ಹಸುರಾಗಸ: ಹಸುರು ಮುಗಿಲು:
    ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ: ಹಸುರು ಕಣಿವೆ;
    ಹಸುರು ಸಂಜೆಯೀ ಬಿಸಿಲು!
ಆಶ್ವೀಜದ ಶಾಲಿವನದ
    ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
    ಕೊನೆವೆತ್ತಡಕೆಯ ತೋಟ!

ಅದೊ ಹುಲ್ಲಿನ ಮಕಮಲ್ಲಿನ
ಹೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!
ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರು!
ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೋ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ!

**ಪ್ರಶ್ನೆಗಳು:**

I. ಶ್ಯಾಮಲ ವನಧಿಯಲಿ ಯಾವುದು ಮಿಂದು ಹಸುರಾಗಿದೆ?

II. ಭೂಮಿಯ ಮೈ ಯಾವುದರಿಂದ ಮುಚ್ಚಿದೆ?

III. ಬತ್ತದ ಗದ್ದೆಯ ಕಾಡಂಚಿನಲ್ಲಿ ಕವಿಗೆ ಏನು ಕಂಡು ಬಂದಿದೆ?

IV. ಹಸುರು ಕವಿಯ ಆತ್ಮದ ಜೊತೆಗೆ ಅವರ ಒಡಲಿನ ಮೇಲೆ ಯಾವ ಪ್ರಭಾವವನ್ನು ಬೀರಿದೆ?

V. ಕವಿಯ ಚರ್ಮಕ್ಕೆ ಹಸುರಿನ ಅನುಭವವನ್ನು ಯಾವುದು ನೀಡಿದೆ?

## SECTION - B

**( ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ ) = 20 ಅಂಕಗಳು**

**5 ಕೆಳಗಿನ ಪ್ರತಿಯೊಂದು ಬಹು ಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **10×1=10**

I. ಬೇಲಿ ಎದ್ದು ಹೊಲ ಮೇಯ್ದು ಹಾಗೆ - ಈ ಗಾದೆಮಾತಿನಲ್ಲಿ ಕಂಡುಬರುವ ಕ್ರಿಯಾಪದಗಳ ಧಾತು ಮತ್ತು ಅವುಗಳ ರೂಪ ____________

ಅ) ಎದ್ದು - ಸಕರ್ಮಕ, ಮೇಯ್ದು - ಅಕರ್ಮಕ ಆ) ಮೇಯು - ಅಕರ್ಮಕ, ಏಳು - ಸಕರ್ಮಕ

ಇ) ಮೇಯ್ದು - ಸಕರ್ಮಕ, ಎದ್ದು - ಅಕರ್ಮಕ ಈ) ಏಳು - ಅಕರ್ಮಕ, ಮೇಯು - ಸಕರ್ಮಕ

II. ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ - ಈ ವಾಕ್ಯದಲ್ಲಿ ಪ್ರಥಮಾ ವಿಭಕ್ತಿಪ್ರತ್ಯಯ ಹೊಂದಿರುವ ಪದ ____________

ಅ) ಗರ್ವಮಂ ಆ) ತನ್ನ ಇ) ಮಾತೆಯಂ ಈ) ಸರ್ವಜನಮುಂ

III. ಕೆಳಗಿನ ಸಮಾಸ ಪದಗಳಲ್ಲಿ ಒಂದೇ ಗುಂಪಿಗೆ ಸೇರುವ ಪದಗಳ ಗುಂಪನ್ನು ಗುರುತಿಸಿ.

೧. ತ್ರಿನೇತ್ರ, ಮೂಗಾವುದ, ಮುಕ್ಕಣ್ಣ

೨. ತೇರುಮರ, ಹಗಲುಗನಸು, ಉತ್ತಮೋತ್ತಮ

೩. ತಲೆಗೊಡವಿ, ತಿಂದಕೂಳು, ಬಟ್ಟೆದೋರು

೪. ಇಂಚರ, ಪೀತವಸ್ತ್ರ, ಇಮ್ಮಾವು

ಅ) ೧ ಮತ್ತು ೩ ಆ) ೨ ಮತ್ತು ೪ ಇ) ೧ ಮತ್ತು ೨ ಈ) ೨ ಮತ್ತು ೪

IV. ಬ್ರಿಟೀಷರು ಭಾರತಕ್ಕೆ ಬಂದು ಭಾರತೀಯರ ಮೇಲೆ ದಬ್ಬಾಳಿಕೆ ನಡೆಸಿ ಅವರ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟು ಮಾಡಿದರು. - ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದವು _________ ಪುರುಷಾರ್ಥಕ ಸರ್ವನಾಮವಾಗಿದೆ.

ಅ) ಉತ್ತಮ ಆ) ಮಧ್ಯಮ ಇ) ಪ್ರಥಮ ಈ) ದ್ವಿತೀಯ

V. ಕೆಳಗೆ ಕೊಟ್ಟಿರುವ ಸಂಧಿ-ಸಂಧಿಪದಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| a. ಬೆಮರ್ವನಿ | 1) ಸವರ್ಣದೀರ್ಘ ಸಂಧಿ |
| b. ವಧೂಪೇತ | 2) ಯಣ್ ಸಂಧಿ |
| c. ವಧ್ವಾಭರಣ | 3) ಲೋಪ ಸಂಧಿ |
| d. ಗೋವನ್ನು | 4) ಆದೇಶ ಸಂಧಿ |
| | 5) ಆಗಮ ಸಂಧಿ |

| | | | |
|---|---|---|---|
| ಅ) a-3: | b-2; | c- 4; | d- 5 |
| ಆ) a-4; | b-1; | c- 2; | d- 5 |
| ಇ) a- 3; | b-2; | c- 5; | d- 4 |
| ಈ) a- 5; | b-3; | c- 1; | d- 2 |

VI. 'ವಾಸಿ' ಪದದ ಸಮಾನಾರ್ಥಕ ಪದ _______________.

ಅ) ಹಣೆ ಆ) ಕುದುರೆ ಇ) ಕೋಪ ಈ) ಪ್ರತಿಜ್ಞೆ

VII. ವೇದಿಯ ಹಿಂಬದಿಯಲ್ಲಿ ಆಶ್ರಮದ ಸಿದ್ಧರು ಅಲಂಕರಿಸಿದ ಹೂವು ಇನ್ನೂ ಬಾಡದಂತಿದೆ. - ಈ ವಾಕ್ಯದಲ್ಲಿ ಗೆರೆ ಎಳೆದ ಪದಗಳು ಕ್ರಮವಾಗಿ ___________ ಮತ್ತು _____________.

ಅ) ಅಂಕಿತನಾಮ, ರೂಢನಾಮ ಆ) ರೂಢನಾಮ, ಸಂಖ್ಯಾವಾಚಕ

ಇ) ದಿಗ್ವಾಚಕ, ರೂಢನಾಮ ಈ) ರೂಢನಾಮ, ಅನ್ವರ್ಥನಾಮ

VIII. ಕೆಳಗೆ ಕೊಟ್ಟಿರುವ ತತ್ಸಮ- ತದ್ಭವಗಳಲ್ಲಿ ಸರಿಯಾದ ರೂಪ ಇದಾಗಿದೆ.

೧. ದ್ವಿತೀಯ-ಬಿದಿಗೆ

೨. ಉದ್ಯೋಗ-ಉಜ್ಜುಗ

೩. ಬಗ್ಗ-ವ್ಯಾಘ್ರ

೪. ಪಾದುಕಾ-ಹಾವುಗೆ

ಅ) ೧, ೨ ಮತ್ತು ೩ ಆ) ೨, ೩ ಮತ್ತು ೪ ಇ) ೧, ೪ ಮತ್ತು ೩ ಈ) ೧, ೨ ಮತ್ತು ೪

IX. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ _____________

ಅ) ಜನಜಂಗುಳಿ ಆ) ಶಕ್ತಿಸಾಮರ್ಥ್ಯ ಇ) ಕಟ್ಟಕಡೆಗೆ ಈ) ನಯನಾಜೂಕು

X. ಉಬ್ಬು- ಹುಬ್ಬು ಈ ಪದಗಳ ಅರ್ಥ ವ್ಯತ್ಯಾಸಗಳ ಕ್ರಮವನ್ನು ಗುರುತಿಸಿ ಬರೆಯಿರಿ.

ಅ) ದಿನ್ನೆ - ಏರು ಆ) ದಿನ್ನೆ - ಭ್ರುಕುಟಿ ಇ) ದಿನ್ನೆ - ಉಕ್ಕು ಈ) ದಿನ್ನೆ - ಹರಡು

**6 ಕೆಳಗಿನವುಗಳನ್ನು ಸೂಚನೆಯಂತೆ ಉತ್ತರಿಸಿ.** **5×1=5**

I. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. (ಈ ವಾಕ್ಯವನ್ನು ವರ್ತಮಾನಕಾಲಕ್ಕೆ ಪರಿವರ್ತಿಸಿ ಬರೆಯಿರಿ)

II. ನನ್ನ ಮಗಳು ಸುಂದರಿಗಾಗಿ ಪುಷ್ಪವನದ ಗುಲಾಬಿಗಳನ್ನು ಕಿತ್ತಳು. - ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ.

III. ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ. - ಈ ವಾಕ್ಯವನ್ನು ಸಂಭಾವನಾರ್ಥಕ ರೂಪದಲ್ಲಿ ಬರೆಯಿರಿ.

IV. ಈ ಕೆಳಗಿನ ಗಾದೆಮಾತನ್ನು ವಿಸ್ತರಿಸಿ ಬರೆಯಿರಿ.

ಆಳಾಗಬಲ್ಲವನು ಅರಸನಾಗಬಲ್ಲ

ಅಥವಾ

ಅಲ್ಪರ ಸಂಗ ಅಭಿಮಾನ ಭಂಗ

V. ಕುಡಿದ ನೀರು ಅಲುಗದ ಹಾಗೆ - ಈ ನುಡಿಗಟ್ಟನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

**7 ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**5×1=5**

I. ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? - ಈ ಸಾಲಿನಲ್ಲಿ ಅವನು ಎಂದರೆ __________

ಅ) ಕಮ್ಮಾರ ಆ) ವಸಂತ ಇ) ಕುಂಬಾರ ಈ) ಬಾಲರವಿ

II. ಅಮೃತಸರದ ಪ್ರಕ್ಷುಬ್ಧ ಪರಿಸ್ಥಿತಿಯ ಅವಧಿಯಲ್ಲಿ ಪಂಜಾಬಿನ ಅಧಿಕಾರಿಯಾಗಿದ್ದ ಕಠೋರ ಹೃದಯದ ಅಧಿಕಾರಿ ತನ್ನ ಸೈನಿಕರಿಗೆ ಗುಂಡಿನ ದಾಳಿ ನಡೆಸಲು ಆಜ್ಞೆ ನೀಡಲು ಕಾರಣ ______________.

ಅ) ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು. ಆ) ಭಗತ್ ಸಿಂಗ್ ನನ್ನು ಬಂಧಿಸಲು.

ಇ) ಸ್ವಾತಂತ್ರ್ಯ ಹೋರಾಟದಲ್ಲಿ ಮುನ್ನಡೆಯಲು. ಈ) ಜನರಲ್ಲಿ ಭೀತಿ ಹುಟ್ಟಿಸಲು.

III. ನಮ್ಮ ಶಾಸ್ತ್ರಗಳಲ್ಲಿ ಹುದುಗಿರುವ, ಮಠ ಮತ್ತು ಅರಣ್ಯಗಳಲ್ಲಿ ಅಡಗಿರುವ ಕೆಲವೇ ವ್ಯಕ್ತಿಗಳ ಸ್ವತ್ತಾಗಿರುವ ________ಗಳನ್ನು ದೇಶ ಭಾಷೆಗಳ ಮೂಲಕ ಜನರಿಗೆ ಪ್ರಚಾರ ಮಾಡಬೇಕು.

ಅ) ವೇದವೇದಾಂತ ಆ) ಆಧ್ಯಾತ್ಮಿಕ ರತ್ನ ಇ) ಸಂಸ್ಕೃತಿ ಈ) ಭಾವನೆ

IV. ಅರಿಯದವರೊಡನೆ ಸಂಗವ ಮಾಡಿದರೆ ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ - ಈ ವಚನದಲ್ಲಿ ಯಾರ ಸಹವಾಸವು ಬೆಂಕಿಯಂತೆ ಅಪಾಯವನ್ನು ತಂದೊಡ್ಡುತ್ತದೆ ಎಂದು ಅಕ್ಕನವರು ಹೇಳಿದ್ದಾರೆ?

ಅ) ಅಸಂಸ್ಕೃತರ ಆ) ಅಶಿಕ್ಷಿತರ ಇ) ಅಸಹಾಯಕರ ಈ) ಅಜ್ಞಾನಿಗಳ

V. ಈಚೆಗೆ ನನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದೆ. ಸುಟ್ಟಮಡಕೆಗೆ ಹಸಿಮಣ್ಣನ್ನು ಮೆತ್ತಲು ಸಾಧ್ಯವೆ? - ಈ ಸಂದರ್ಭದಲ್ಲಿ ಕಂಡುಬಂದಿರುವ ಗಾದೆಯ ಅರ್ಥ ___________________

ಅ) ಮಾಡಿದ ತಪ್ಪನ್ನು ಸರಿ ಪಡಿಸಲು ಸಾಧ್ಯವಿಲ್ಲ.

ಆ) ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡಬೇಕು.

ಇ) ಮಾಡಿದ ತಪ್ಪನ್ನು ತಿದ್ದಿಕೊಳ್ಳಬಹುದು.

ಈ) ಮಾಡಿದ ತಪ್ಪನ್ನು ಸುಳ್ಳು ಹೇಳಿ ಸರಿಪಡಿಸಬಹುದು.

**ಭಾಗ – B (40 ಅಂಕಗಳು)**

**SECTION - C**

**(ಬರವಣಿಗೆ ಕೌಶಲ್ಯ) = 12 ಅಂಕಗಳು**

**8 ಸಾರ್ವಜನಿಕ ಹಬ್ಬಗಳಲ್ಲಿ ಉಪಯೋಗಿಸುವ ಧ್ವನಿವರ್ಧಕಗಳ ಹಾವಳಿಯನ್ನು ತಪ್ಪಿಸುವಂತೆ ಕೋರಿ ನಿಮ್ಮ ಪ್ರಾದೇಶಿಕ ಆರಕ್ಷಕ ವೃತ್ತ ನಿರೀಕ್ಷಕರಿಗೆ ಪತ್ರ ಬರೆಯಿರಿ.** **1×4=4**

**ಅಥವಾ**

**ದಿನಾಂಕ 18-01-2026ರ ಶಬ್ದವೇಧಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ರಾಷ್ಟ್ರೋತ್ಥಾನ ವಿದ್ಯಾ ಪರಿಷತ್ತಿನಲ್ಲಿ ಖಾಲಿ ಇರುವ ಸಂಯೋಜನಾಧಿಕಾರಿಗಳ ಹುದ್ದೆಗಾಗಿ "ನಿರ್ದೇಶಕರು, ರಾಷ್ಟ್ರೋತ್ಥಾನ ವಿದ್ಯಾ ಪರಿಷತ್ತು, ಬೆಂಗಳೂರು-೬೦" ಇವರಿಗೆ ಒಂದು ಅರ್ಜಿ ಸಲ್ಲಿಸಿ.**

**9 ನಿಮ್ಮ ಶಾಲೆಯಲ್ಲಿ ಜರುಗಿದ ಪ್ರಾಣಿಗಳ ಹಕ್ಕುಗಳು ಮತ್ತು ಕಲ್ಯಾಣ ಕಾರ್ಯಗಳ ಜಾಗೃತಿ ಕಾರ್ಯಕ್ರಮವನ್ನು ಕುರಿತು ಒಂದು ವರದಿ ಸಿದ್ಧಪಡಿಸಿ. 1×4=4**

**10 ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರು ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1×4=4**

I. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ
II. ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ
III. ಭಾರತೀಯ ರಕ್ಷಣಾ ಪಡೆ

## SECTION - D

**(ಪಠ್ಯಗಳ ಅಧ್ಯಯನ) = 28 ಅಂಕಗಳು**

**11 ಈ ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿ. 4×2=8**

I. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ ಮಾತುಗಳೇನು?
II. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನುತ್ತಾರೆ?
III. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯು ಹೇಗೆ ಸಂಭ್ರಮಿಸುತ್ತಿದೆ?
IV. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

**12 ಈ ಕೆಳಗಿನ ಪ್ರಶ್ನೆಗಳಿಗೆ ಐದು - ಆರು ವಾಕ್ಯಗಳಲ್ಲಿ ಉತ್ತರಿಸಿ: 2×3=6**

I. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಹೆಸರು ಬರಲು ಕಾರಣವೇನು?
II. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

**13 ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ. 2×3=6**

I. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ".

**ಅಥವಾ**

"ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು".

II. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು".

**ಅಥವಾ**

"ರವಿಸುತನ ಕಿವಿಯಲಿ ಬಿತ್ತಿದನು ಭಯವ".

**14 ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 1×4=4**

I. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

**ಅಥವಾ**

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯವೇನು ಹಾಗು ಶಿಕ್ಷಣಕ್ಕೆ ಅವರು ನೀಡಿದ ಕೊಡುಗೆಗಳ ಬಗ್ಗೆ ತಿಳಿಸಿ.

**15 ಈ ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **1×4=4**

೧. ಲವನು ಅಶ್ವಮೇಧದ ಕುದುರೆಯನ್ನು ಕಟ್ಟಿ ವೀರಲವನೆನಿಸಿಕೊಂಡ ಸಂದರ್ಭವನ್ನು ವಿವರಿಸಿ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ತಿಳಿಸಿ.

********************************